ಸ್ಯಾರಿ ದೋತಿ ಸ್ಕೀಂನಲ್ಲಿ 25 ದಿವಸ ಸಂಪೂರ್ಣ ಕೆಲಸ ಮಾಡಿದರೆ 70 ದಿವಸ ಹೆಚ್ಚಿಗೆ ಕೊಡುವಂತಹ ವ್ಯವಸ್ಥೆಯನ್ನು ಮಾಡಿ ಅಂದರೆ ಅವರು ಕೆಲಸ ಮಾಡಲಿ ಅನ್ನುವ ಉದ್ದೇಶದಿಂದ ಈ ಸ್ಕೀಮನ್ನೂ ಸಹ ನಾವು ಇಂಟರ್‌ಡ್ಯೂಸ್ ಮಾಡಿದ್ದೇವೆ. ಮತ್ತು ಜವಳಿ ನೀತಿಯಲ್ಲಿ ಎಷ್ಟನ್ನು ಅಳವಡಿಸಿದ್ದೀರಿ ಎಂದು ಪ್ರಸ್ತಾಪ ಮಾಡಿದ್ದಾರೆ.

ಜವಳಿ ನೀತಿಯಲ್ಲಿ 17 ಪ್ರೊಗ್ರಾಂಗಳು ನಮ್ಮಲ್ಲಿ ಇವೆ. ಅದರಲ್ಲಿ 10 ಪ್ರೊಗ್ರಾಂಗಳನ್ನು ಈಗಾಗಲೇ ಇಂಪ್ಲಿಮೆಂಟ್ ಮಾಡಿದ್ದೇವೆ. ಇನ್ನು ಕೆಲವೊಂದು ಹಂತ ಹಂತವಾಗಿ ಕಾರ್ಯಕ್ರಮ ತೆಗೆದುಕೊಳ್ಳುತ್ತೇವೆ ಎನ್ನುವಂತಹ ಮಾತನ್ನು ತಿಳಸಲಿಕ್ಕೆ ಇಚ್ಛಿಪಡುತ್ತೇನೆ. ಮತ್ತು ನೇಕಾರರಿಗೆ ಪೆನ್‌ಷನ್ ಕೊಡುವಂತಹ ವಿಚಾರ ಬಹಳ ದಿವಸಗಳಿಂದ ಪೆಂಡಿಂಗ್ ಇರುವುದು ನಿಜ. ಇದು ಹಲವಾರು ಫೈನಾನ್‌ಷಿಯಲ್ ಡಿಪಾರ್ಟ್‌ಮೆಂಟ್‌ಗೆ ಬಂದಿರುವುದರಿಂದ ಇದು ತಡವಾಗಿದೆ. ನಾನು ಈಗಾಗಲೆ, ಈ ಖಾತೆಯನ್ನು ವಹಿಸಿಕೊಂಡ ಮೇಲೆ ಎರಡು ಮೀಟಿಂಗ್ ಮಾಡಿದೆ. ಮತ್ತು ಶೀಘ್ರದಲ್ಲಿ ಇದನ್ನು ಇಂಪ್ಲಿಮೆಂಟ್ ಮಾಡುವಂತಹ ಕ್ರಮ ತೆಗೆದುಕೊಳ್ಳುತ್ತೇನೆಂದು ಮಾನ್ಯ ಸದಸ್ಯರಿಗೆ ತಿಳಿಸಲಿಕ್ಕೆ ಇಚ್ಛಿಪಡುತ್ತೇನೆ.

ಶ್ರೀ ಜಗದೀಶ್ ತಿಮ್ಮನಗೌಡ ಪಾಟೀಲ್: ಜಮಖಂಡಿ ನೇಕಾರ ಮುಂದುವರೆದ ತರಬೇತಿ ಕೇಂದ್ರ ಮತ್ತು ನೇಕಾರರ ಪೆನ್‌ಶನ್ ಬಗ್ಗೆ ಯಾವಾಗ ಪರಿಶೀಲನೆ ಅಥವಾ ಪ್ರಾರಂಭ ಮಾಡುತ್ತೀರಿ ಎನ್ನುವುದು ಬೇಡ. ದಯಮಾಡಿ ತಾವು ನಿಖರವಾಗಿ ಎಷ್ಟು ಬೇಗ ಪ್ರಾರಂಭ ಮಾಡುತ್ತೀರಿ ಎಂಬುದನ್ನು ಹೇಳಿದರೆ ಬಹಳ ಸಂತೋಷವಾಗುತ್ತದೆ.

ಶ್ರೀ ಸುಭಾಷ್ ರುಕ್ಮಯ್ಯ ಗುತ್ತೇದಾರ: ನನ್ನ ಆಳಂದ ಗ್ರಾಮದಲ್ಲಿ ಕೂಡ 2,600 ನೇಕಾರರು ಗ್ರಾಮೀಣ ಪ್ರದೇಶಗಳಲ್ಲಿ ಇದ್ದಾರೆ. ಅವರಿಗೆ ಬೇರೆ ಯಾವ ಕೆಲಸಗಳೂ ಬರುವುದಿಲ್ಲ, ಅವರಿಗೆ ನೇಯುವುದು ಒಂದೇ ಕೆಲಸ. ಅದಕ್ಕೆ ನೂಲು ಸರಿಯಾಗಿ ಸಪ್ಲೈ ಆಗುತ್ತಾ ಇಲ್ಲ. ಎರಡು, ಎರಡು ತಿಂಗಳು ಖಾಲಿ ಕೂಡುತ್ತಾ ಇದ್ದಾರೆ, ಒಂದು ಸಲ ಬಂದರೆ ಎರಡು ತಿಂಗಳು ಅವರಿಗೆ ನೂರು ಸಿಗುತ್ತಾ ಇಲ್ಲ, ಅದರ ಸಲುವಾಗಿ ಮಾನ್ಯ ಮಂತ್ರಿಗಳು ಹೇಳಬೇಕು.

ಅಧ್ಯಕ್ಷರು: ಪ್ರಶ್ನೆ ಸಂಖ್ಯೆ 102 (773)ಕ್ಕೆ ಗಣಿ ಮತ್ತು ಭೂ ವಿಜ್ಞಾನ ಸಚಿವರು ಸಮಯ ಕೇಳಿದ್ದಾರೆ, ದಯಮಾಡಿ ಸಹಕರಿಸಿ.

ಸಿಂಧನೂರು ಪುರಸಭಾ ವಾಣಿಜ್ಯ ಸಂಕೀರ್ಣ

103 (920) ಶ್ರೀ ಕೆ. ವಿರೂಪಾಕ್ಷಪ್ಪ:

ಮಾನ್ಯ ಅಧ್ಯಕ್ಷರೆ, ಉತ್ತರವನ್ನು ಒದಗಿಸಲಾಗಿದೆ. ಉತ್ತರದಲ್ಲಿ ಸಿಂಧನೂರು ಪುರಸಭೆಯಲ್ಲಿ 21 ವಾಣಿಜ್ಯ ಮಳಿಗೆಗಳನ್ನು ಕಟ್ಟಲಾಗಿದೆಯೆಂದು ಹೇಳಿದ್ದಾರೆ ಮತ್ತು 1970ರಲ್ಲಿ ಹಂಚಿಕೆ ಮಾಡಲಾಗಿದೆಯೆಂದು ಹೇಳಿದ್ದಾರೆ. 1970ರ ನಂತರ ಮೊದಲ ಹಂಚಿಕೆ ಯಾವ ಕಾರಣದಿಂದ ಮಾಡಿಲ್ಲ? ಇದು ಒಂದನೇ ಪ್ರಶ್ನೆ.

ಎರಡನೆಯದಾಗಿ, ಈಗಾಗಲೇ 70 ರಿಂದ ಏನು ಕೊಟ್ಟಿದ್ದಾರೆ ಅದನ್ನು 50 ರೂಪಾಯಿ, 100 ರೂಪಾಯಿ ಬಾಡಿಗೆ ಮೇಲೆ ಕೊಟ್ಟಿರುವಂತಹ ಮಳಿಗೆಗಳು ಇವತ್ತು ಎರಡು ಸಾವಿರ, ಮೂರು ಸಾವಿರ ಮಳಿಗೆ ಬಾಡಿಗೆ ನಡೆಯುತ್ತಿದೆ. ಮತ್ತು 50 ರೂಪಾಯಿಗಳಂತೆ ಯಾರು ಬಾಡಿಗೆದಾರರು ಪಡೆದುಕೊಂಡಿದ್ದಾರೆ ಇವರು ಯಾರೂ ಕೂಡ ಮಳಿಗೆಯಲ್ಲಿ ಇಲ್ಲ. ಆದರೆ ಇವತ್ತು ಎಲ್ಲರೂ ಕೂಡ ಎರಡು ಸಾವಿರ, ಮೂರು ಸಾವಿರ ರೂಪಾಯಿ ಬಾಡಿಗೆಗೆ ಕೊಟ್ಟಿದ್ದಾರೆ, ಅವರ ಬಗ್ಗೆ ಸರ್ಕಾರದ ಕ್ರಮ ಏನು? ಮೂರನೆಯದಾಗಿ ಮಳಿಗೆ ನಂ. 4 ಕಾಯ್ದೆ ಉಲ್ಲಂಘನೆ ಮಾಡಿ ಹಂಚಿಕೆ ಮಾಡಲಾಗಿದೆ. ಅಂತಹ ಅಧಿಕಾರಿಗಳ ಮೇಲೆ ಸೂಕ್ತ ಕ್ರಮ ತೆಗೆದುಕೊಳ್ಳುತ್ತೇವೆ ಎಂದು ಹೇಳಿದ್ದೀರಿ, ಅದರ ಜೊತೆಗೆ ಕಾನೂನು ಬಾಹಿರವಾಗಿ ಹಂಚಲಾಗಿರುವ 4ನೇ ನಂ. ಮಳಿಗೆ ಬಾಡಿಗೆದಾರರ ಮೇಲೆ ತಮ್ಮ ಸರ್ಕಾರದ ಕ್ರಮ ಏನು ಎಂದು ಹೇಳಬೇಕು.

ಶ್ರೀ ಮಿರಾಜುದ್ದೀನ್ ಎನ್. ಪಾಟೀಲ್: ಸನ್ಮಾನ್ಯ ಅಧ್ಯಕ್ಷರೆ, ಸಿಂಧನೂರು ಪುರಸಭೆಯಲ್ಲಿ 1969-70ನೇ ಸಾಲಿನಲ್ಲಿನ 21 ಶಾಪಿಂಗ್ ಕಾಂಪ್ಲೆಕ್ಸ್ ಡಿಸ್ಟ್ರಿಬ್ಯೂಟ್ ಮಾಡಿದ್ದಾರೆ. ಅದರಲ್ಲಿ ಮಳಿಗೆ ನಂ. 4 ಅದರ ಮೇಲೆ ಒಂದು ದೂರು ಬರುವುದಕ್ಕೆ ಕಾರಣ ಏನು ಎಂದರೆ ಇದರ ಒಂದು ಪ್ರಿಲಿಮಿನರಿ ಎನ್‌ಕ್ವೈರಿ ರಿಪೋರ್ಟ್ ನಾವು ಡಿ.ಸಿ. ಯವರಿಂದ ಕೇಳಿದ್ದೆವು.

ರಿಪೋರ್ಟ್ ಬಂದಿದೆ, ಆ ರಿಪೋರ್ಟ್ ಏನು ಇದೆ ಅಂದರೆ ಡಿ.ಸಿ. ರಾಯಚೂರ್‌ಗೆ ಒಂದು ಆರ್ಟಿಕಲ್ ಆಫ್ ಚಾರ್ಜ ಶೀಟ್ ಮಾಡಿ ಕಳಿಸಲಿಕ್ಕೆ ಒಂದು ಪತ್ರ ಬರೆದಿದ್ದೇನೆ. ಆ ಡಿ.ಸಿ. ಅವರಿಂದ ಚಾರ್ಜ್‌ಶೀಟ್ ಬಂದ ಮೇಲೆ ಆ್ಯಕ್ಷನ್ ತೆಗೆದುಕೊಳ್ಳುತ್ತೇನೆ.

ಶ್ರೀ ಕೆ. ವಿರೂಪಾಕ್ಷಪ್ಪ: ಈ ಅಧಿಕಾರಿಗಳ ಮೇಲೆ ಯಾವ ಕ್ರಮ ತೆಗೆದುಕೊಳ್ಳುತ್ತೀರಿ? ಕಾನೂನು ಬಾಹಿರವಾಗಿ ಪಡೆದಿರುವಂತಹ ಮಳಿಗೆ ಬಾಡಿಗೆದಾರರ ಮೇಲೆ ಸರ್ಕಾರದ ಕ್ರಮ ಏನು?

ಶ್ರೀ ಮಿರಾಜುದ್ದೀನ್ ಎನ್. ಪಾಟೀಲ್: ದೂರು ಬಂದಿಲ್ಲ ಅದಕ್ಕೆ ಹಿಂದೆ ಚೀಫ್ ಆಫೀಸರ್ ತಪ್ಪು ಮಾಡಿದ್ದಾರೆ ಎಂದು ಹೇಳಿ ಮಳಿಗೆ ನಂ. 4 ಅದರ ಬಗ್ಗೆ ಚಾರ್ಜ್ ಶೀಟ್ ಹಾಕಿ ಕಳಿಸುವುದಕ್ಕೆ ನಾವು ಪತ್ರ ಬರೆದಿದ್ದೇವೆ. ಸಂಬಂಧಪಟ್ಟವರ ಮೇಲೆ ಆ್ಯಕ್ಷನ್ ತೆಗೆದುಕೊಳ್ಳುತ್ತೇವೆ.

ಶ್ರೀ ಕೆ. ವಿರೂಪಾಕ್ಷಪ್ಪ: ಬರೀ ಅಧಿಕಾರಿ ಮೇಲೆ ಕ್ರಮ ತೆಗೆದುಕೊಳ್ಳುವುದಿಲ್ಲ ನಾನು ಕೇಳುತ್ತಾ ಇರುವುದು, ಬಾಡಿಗೆದಾರರ ಮೇಲೆ ಏನು ಕ್ರಮ ತೆಗೆದುಕೊಳ್ಳುತ್ತೀರಾ?

ಅಧ್ಯಕ್ಷರು: ವಿರೂಪಾಕ್ಷಪ್ಪನವರೆ, ಮುನಿಸಿಪಾಲಿಟಿಯವರು ಮಳಿಗೆ ಕಟ್ಟಿರುತ್ತಾರೆ ಅದನ್ನು ಆ್ಯಕ್ಷನ ಹಾಕುತ್ತಾರೆ. ಕೆಲವರು ಆ್ಯಕ್ಷನಲ್ಲಿ ಹೆಚ್ಚು ಬಾಡಿಗೆ ಯಾರೂ ನಮೂದು ಮಾಡುತ್ತಾರೋ ಅವರಿಗೆ ಮಳಿಗೆಯನ್ನು ಕೊಡುತ್ತಾರೆ. ಸ್ವಲ್ಪ ದಿವಸ ಆದ ನಂತರ ಅವರು ಬೇರೆ ಬಾಡಿಗೆದಾರರಿಗೆ ಲೀಸ್ ತರಹ ಕೊಡುತ್ತಾರೆ, ರೆಕಾರ್ಡ್ಸನಲ್ಲಿ ಅವರೇ ಉಳಿದುಕೊಳ್ಳುತ್ತಾರೆ.

ಶ್ರೀ ಕೆ. ವಿರೂಪಾಕ್ಷಪ್ಪ: ಇದು ಹಾಗೆ ಹಾಗಿಲ್ಲ ಸ್ವಾಮಿ, 4ನೇ ನಂ. ಮಳಿಗೆ ಹರಾಜು ಹಾಕಿಲ್ಲ, ಯಾರೋ ಬಂದು ಹೊಕ್ಕಿಕೊಂಡು ಬಿಟ್ಟಿದ್ದಾರೆ. ಅಧಿಕಾರಿ ಆರ್ಡರ್ ಮಾಡಿ ಕೊಟ್ಟು

ಬಿಟ್ಟರು. ಇದರ ಮೇಲೆ ಕಂಪ್ಲೇಂಟ್ ಆದನಂತರ ಎನ್‌ಕ್ವೈರಿ ಆಗಿ ಕ್ರಮ ತೆಗೆದುಕೊಳ್ಳುತ್ತೇವೆಂದು ಹೇಳುತ್ತಾರೆ. ಆದರೆ ಅದನ್ನು ಕಾನೂನು ಬಾಹಿರವಾಗಿ ಕೊಟ್ಟಿರುವುದರಿಂದ ಆ ಬಾಡಿಗೆದಾರರ ಮೇಲೆ ಯಾವ ಕ್ರಮ ತೆಗೆದುಕೊಳ್ಳುತ್ತೀರಿ ಎನ್ನುವುದು ನನ್ನ ಪ್ರಶ್ನೆ.

ಅಧ್ಯಕ್ಷರು: ಬಾಡಿಗೆದಾರನ ಮೇಲೆ ಕ್ರಮ ಎಂದೆ ಅಂದರೆ ಏನು?

ಶ್ರೀ ಕೆ. ವಿರೂಪಾಕ್ಷಪ್ಪ: ಇಲ್ಲ ಅವರನ್ನು ಬಿಡಿಸಬೇಕು ಇಲ್ಲವೇ ಅದನ್ನು ಹರಾಜು ಹಾಕಬೇಕು.

ಅಧ್ಯಕ್ಷರು: ಅಧಿಕಾರಿಗಳು ಮಾಡಿರುವ ತಪ್ಪು ಗಮನಕ್ಕೆ ಬಂದ ತಕ್ಷಣ ಮುಂದಿನ ಕ್ರಮ ಜಾಗ ಖಾಲಿ ಮಾಡಿಸಬೇಕು, ಅದನ್ನು ಮಾಡಿಸುತ್ತಾರೆ ಬಿಡಿ.

ಶ್ರೀ ಕೆ. ವಿರೂಪಾಕ್ಷಪ್ಪ: ಅದನ್ನು ಅವರು ಹೇಳಬೇಕು.

ಅಧ್ಯಕ್ಷರು: ಆ್ಯಕ್ಷನ್ ಏನು ಮಿರಾಜುದ್ದೀನ್ ಅವರೇ? If the action of your officer on the spot is found to be erroneous.

ತಪ್ಪು ಮಾಡಿದ್ದಾರೆ ಎಂದು ನಿಮ್ಮ ಮನಸ್ಸಿಗೆ ಬಂದರೆ ನಂತರ ನೀವು ಅಧಿಕಾರಿ ಮೇಲೆ ಕ್ರಮ ತೆಗೆದುಕೊಳ್ಳುವುದು, ಏನು ಮಾಡಬೇಕು ಅಂದರೆ ಆ ಜಾಗ ತೆರವು ಮಾಡಿಸಿ ಓಪನ್ ಆ್ಯಕ್ಷನ್ ಅಥವಾ ಟೆಂಡರ್ ಏನಾದರೂ ಕರೆಯಬೇಕು.

ಶ್ರೀ ಮಿರಾಜುದ್ದೀನ್ ಎನ್. ಪಾಟೀಲ್: ಮಾನ್ಯ ಅಧ್ಯಕ್ಷರೆ, ಹಿಂದೆ ಇದ್ದಂತಹ ಚೀಫ್ ಆಫೀಸರ್ ಮೇಲೆ ಕ್ರಮ ತೆಗೆದುಕೊಂಡು ಅವರ ತಪ್ಪು ಏನಾದರೂ ಇದ್ದರೆ ಅವರ ಮೇಲೆ ಆ್ಯಕ್ಷನ್ ತೆಗೆದುಕೊಳ್ಳುತ್ತೇನೆ ಮತ್ತು ಇಲ್ಲೀಗಲ್ ಮಾಡಿದ್ದಾರೆ ಎಂದು ಹೇಳಿ ಕ್ರಮ ಜರುಗಿಸುತ್ತೇನೆ.

ಅಧ್ಯಕ್ಷರು: ಅವರು ಏನು ಹೇಳುತ್ತಾರೆ ಕೇಳಿ.

ಶ್ರೀ ಕೆ. ವಿರೂಪಾಕ್ಷಪ್ಪ: ಉಳಿದ 20 ಮಳಿಗೆಗಳು 70ರ ನಂತರ ಮರು ಹಂಚಿಕೆ ಆಗಿಲ್ಲ ಅದಕ್ಕೆ ಕಾರಣ ಏನು? ಈಗ ಈ ಮಳಿಗೆಗಳಿಗೆ 2 ಸಾವಿರ 3 ಸಾವಿರ ರೂಪಾಯಿ ಬಾಡಿಗೆ ನಡೆಯುತ್ತಾ ಇದೆ ಅದು 50 ರೂಪಾಯಿಗೆ ಬಾಡಿಗೆಗೆ ಕಕೊಟ್ಟಿರತಕ್ಕಂಥದ್ದು. ಅದರ ಮೇಲೆ ಸರ್ಕಾರ ಕ್ರಮ ಏನು?

ಅಧ್ಯಕ್ಷರು: ಮರು ಹಂಚಿಕೆ ಅಂದರೆ ಅವೆಲ್ಲಾ ಖಾಲಿ ಇದೆಯೇ?

ಶ್ರೀ ಮಿರಾಜುದ್ದೀನ್ ಎನ್. ಪಾಟೀಲ್: ಅವು ಖಾಲಿ ಇಲ್ಲಿ, ಬೇರೆಯವರಿಗೆ ಬಾಡಿಗೆ ಕೊಟ್ಟಿದ್ದಾರೆ.

ಅಧ್ಯಕ್ಷರು: ಅವರು ಕೋರ್ಟಿಗೆ ಹೋಗುತ್ತಾರೆ ಸ್ಟೇ ತರುತ್ತಾರೆ ನಾವೇ ಇದ್ದೇವೆ ಎಂದು ಹೇಳುತ್ತಾರೆ ಸಬ್ ಲೀಸ್ ಮಾಡುವುದು ಏನು ಆಗುತ್ತದೆ ಅಂದರೆ ನೀವು ಮಂತ್ರಿಗಳು ಆಗಿದ್ದೀರಿ, ಸಬ್ ಲೀಸ್ ಆಗಿರುವುದು ರೆಕಾರ್ಡ್‌ನಲ್ಲಿ ತೋರಿಸಿರುವುದಿಲ್ಲ. ತಿಂಗಳು ತಿಂಗಳು ಯಾರೂ

ಬಾಡಿಗೆದಾರರು ಇರುತ್ತಾರೋ ಅವರು ಬಾಡಿಗೆ ಕಟ್ಟುತ್ತಾ ಇರುತ್ತಾರೆ. ಅದಕ್ಕೆ ಏನು ಮಾಡಬೇಕು ಎಂದರೆ ನೀವು ಒಂದು ಕಂಪ್ಲೆಂಟ್ ಕಳುಹಿಸಬೇಕು.

ಶ್ರೀ ಮಿರಾಜುದ್ದೀನ್ ಎನ್. ಪಾಟೀಲ್: ಯಾರಿಗೆ?

ಅಧ್ಯಕ್ಷರು: ನೀವು ಸರ್ಕಾರದ ಗಮನಕ್ಕೆ ಕಂಪ್ಲೆಂಟ್ ತರಬೇಕು, ಇಂತಹ ಅಂಗಡಿಯಲ್ಲಿ ಇಂತಹವರು ಬಾಡಿಗೆಗೆ ತೆಗೆದುಕೊಂಡಿದ್ದಾರೆ, ಅವರು ನಡೆಸುತ್ತಾ ಇಲ್ಲ, ಅವರು ಬೇರೊಬ್ಬರಿಗೆ ಬಾಡಿಗೆಯನ್ನು ಕೊಟ್ಟಿದ್ದಾರೆ, ಇದರಿಂದ ಸರ್ಕಾರಕ್ಕೆ ವಂಚನೆ ಆಗುತ್ತಾ ಇದೆ, ಮತ್ತು ಮುನಿಸಿಪಾಲಿಟಿಗೆ ಬರುವ ಆದಾಯ ಕಡಿಮೆಯಾಗುತ್ತಿದೆ. ಆದ್ದರಿಂದ ಇದನ್ನು ತೆರವು ಮಾಡಿಸಿ ಪುನಃ ಆ್ಯಕ್ಷನ್ ಮಾಡಿಸಿದರೆ ಹೆಚ್ಚು ಆದಾಯ ಬರುತ್ತದೆಂದು ನೀವು ಅರ್ಜಿ ಕೊಡಬೇಕು. ಇಲ್ಲದಿದ್ದರೆ ಅವರ ಗಮನಕ್ಕೆ ಹೇಗೆ ಬರುತ್ತದೆ. ಆದ್ದರಿಂದ ನೀವು ಲಿಖಿತ ಮೂಲಕವಾಗಿ ಅವರ ಗಮನಕ್ಕೆ ತೆಗೆದುಕೊಂಡು ಬನ್ನಿ.

ಸಣ್ಣ ಕೈಗಾರಿಕೆಗಳಿಗೆ ಮೂಲ ಭೂತ ಸೌಲಭ್ಯಗಳು

104 (667) ಶ್ರೀ ಬಿ.ಶಿವರಾಮು:

(ಶ್ರೀ ಡಿ.ಆರ್. ಪಾಟೀಲ್ ಅವರ ಪರವಾಗಿ) ಮಾನ್ಯ ಅಧ್ಯಕ್ಷರೆ, ಈಗ ಗ್ರೋತ್ ಸೆಂಟರ್‌ಗೆ ಧಾರವಾಡ ರಾಯಚೂರು, ಹಾಸನಕ್ಕೆ 7720 ಲಕ್ಷ ಕೇಂದ್ರದಿಂದ ಬಂದಿದೆಯೆಂದು ಹೇಳಿದ್ದಾರೆ, ರಾಜ್ಯ ಸರ್ಕಾರದಿಂದ ಇನ್ನೂ 750 ರೂ. ಬಿಡುಗಡೆಯಾಗಬೇಕೆಂದು ಹೇಳಿರುತ್ತಾರೆ. ಯಾವಾಗ ಅದು ಬಿಡುಗಡೆಯಾಗುತ್ತದೆ? ಎಷ್ಟು ಖರ್ಚು ಮಾಡಿದ್ದೀರಿ? ಯಾವ್ಯಾವುದಕ್ಕೆ ಎಷ್ಟು ಖರ್ಚು ಮಾಡಿದ್ದೀರಿ? ಎರಡನೆಯದಾಗಿ, ಕೆಲವು ಮಿನಿ ಗ್ರೋಲೌ ಸೆಂಟರ್‌ಗಳನ್ನು ಪ್ರಾರಂಭ ಮಾಡುತ್ತೀದ್ದೇವೆಂದು ಹೇಳಿದ್ದೀರಿ. ಅದು ಯಾವ ಹಂತದಲ್ಲಿದೆ? ಮೂರನೆಯದಾಗಿ, ಸಹಕಾರಿ ಕ್ಷೇತ್ರದಲ್ಲಿ ಕೈಗಾರಿಕಾ ವಸಾಹತುಗಳಿಗೆ ಮೂಲಭೂತ ಸೌಲಭ್ಯಗಳನ್ನು ಒದಗಿಸುತ್ತಿದ್ದೇವೆಂದು ಹೇಳಿದ್ದೀರಿ, ಏನನ್ನು ಒದಗಿಸಿದ್ದೀರಿ? ಎಷ್ಟು ಹಣ ಬಂದಿದೆ?

ಶ್ರೀ ಬಿ.ಎ. ಮೊಯಿದ್ದೀನ್ (ಸಣ್ಣ ಕೈಗಾರಿಕೆಗಳ ಸಚಿವರು): ಮಾನ್ಯ ಅಧ್ಯಕ್ಷರೆ, ಹಾಸನ, ರಾಯಚೂರು ಮತ್ತು ಧಾರವಾಡ ಈ ಮೂರು ಪ್ರದೇಶಗಳಲ್ಲಿ ಕೈಗಾರಿಕೆಯ ಅಭಿವೃದ್ಧಿಯಲ್ಲಿ ಬಹಳ ಹಿಂದುಳಿದಿರುವಂಥ ಪ್ರದೇಶವೆಂದು ಕೇಂದ್ರ ಸರ್ಕಾರ ಮತ್ತು ರಾಜ್ಯ ಸರ್ಕಾರ ಮನಗಂಡು, ಈ ಮೂರು ಕೇಂದ್ರಗಳಲ್ಲಿ ಗ್ರೋಲೌ ಸೆಂಟರ್‌ಗಳನ್ನು ಮಾಡಿದೆ. ಹಾಸನದ ಬಗ್ಗೆ ಮಾನ್ಯ ಶಿವರಾಮ್‌ರವರಿಗೆ ಚೆನ್ನಾಗಿ ಗೊತ್ತಿದೆ. ಅಲ್ಲಿ ಬಹಳ ವೇಗವಾಗಿ ಅದು ಅಭಿವೃದ್ಧಿಯಾಗುತ್ತಿದೆ, ಈಗಾಗಲೇ ಹೇಮಾವತಿ ನದಿಯಿಂದ ಅಲ್ಲಿಗೆ ನೀರನ್ನು ಸರಬರಾಜು ಮಾಡಲಾಗುತ್ತಿದೆ. ಸುಮಾರು ಇಪ್ಪತ್ತೆಂಟು ಕೋಟಿ ರೂಪಾಯಿಗಳ ವೆಚ್ಚದ ಯೋಜನೆ ಅದು. ಅದರ ಜೊತೆಗೆ ಅಲ್ಲಿ ಎರಡನೇ ಹಂತದ ಗ್ರೋಲೌ ಸೆಂಟರ್‌ನ್ನು ಎರಡನೆಯ ತಾರೀಖು ಮಾನ್ಯ ಪ್ರಧಾನ ಮಂತ್ರಿಯವರು ಉದ್ಘಾಟನೆ ಮಾಡುವವರಿದ್ದಾರೆ. ಇದಲ್ಲದೆ ಧಾರವಾಡ ಗ್ರೋಲೌ ಸೆಂಟರ್‌ಗೆ ಇಲ್ಲಿ ನಮೂದಿಸಿರುವುದಕ್ಕಿಂತ ಜಾಸ್ತಿ ಹಣವನ್ನು ಈಗಾಗಲೇ ಖರ್ಚು ಮಾಡಿದ್ದೇವೆ. ಹುಬ್ಬಳ್ಳಿ ಮತ್ತು ಧಾರವಾಡ ಮಧ್ಯದಲ್ಲಿನ ರಾಷ್ಟ್ರೀಯ ಹೆದ್ದಾರಿಯ ಪಕ್ಕದಲ್ಲಿ